ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 231
ಸದಸ್ಯರ ಹೆಸರು : ಶ್ರೀ ಎನ್.ಎಸ್. ಬೋಸರಾಜು
ಉತ್ತರಿಸುವ ದಿನಾಂಕ : 16-07-2019
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ)	ತುಂಗಭದ್ರಾ ಅಣೆಕಟ್ಟಿನಲ್ಲಿ ತುಂಬಿರುವ 33 ಟಿ.ಎಂ.ಸಿ. ಪೀಟ್ ಹೂಳಿನಿಂದ ಕಡಿಮೆ ಆಗಿರುವ ನೀರಿನ ಸಂಗ್ರಹಣಾ ಪರಿಷ್ಕರಿಸಲು ನವಲಿ ಗ್ರಾಮದ ಹತ್ತಿರ ಸಮತೋಲನ ಜಲಾಶಯ ನಿರ್ಮಿಸಲು ಉದ್ದೇಶಿಸಿರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗೂ ನೆರೆ ನೀರು ಕಾಲುವೆ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಹೌದು. 2018-19 ಆಯವ್ಯಯದಲ್ಲಿ "Construction of balancing reservoir through flood flow canal near Navali an alternative to overcome storage capacity deficit in the Tungabhadra reservoir" ಬಗ್ಗೆ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲು ಘೋಷಿಸಲಾಗಿದೆ. ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳಿನಿಂದಾಗಿ ನಷ್ಟವಾಗಿರುವ ನೀರಿನ ಕೊರತೆಯನ್ನು ನೀಗಿಸುವ ಯೋಜನೆಗಾಗಿ ತಯಾರಿಸಿರುವ "Pre-feasibility report on SILTATION IN TUNGABHADRA RESERVOIR - Capacity restoration by constructing balancing reservoir near Navali through augmentation cum flood flow canal" ಪ್ರಸ್ತಾವನೆಯನ್ನು ತಯಾರಿಸಲಾಗಿರುತ್ತದೆ. ತುಂಗಭದ್ರಾ ಯೋಜನೆಯು ಅಂತರ ರಾಜ್ಯ ಯೋಜನೆಯಾಗಿರುವುದರಿಂದ ಸದರಿ ಪ್ರಸ್ತಾವನೆಯನ್ನು ದಿನಾಂಕ: 27-12-2018ರಂದು ಜರುಗಿದ 213ನೇ ತುಂಗಭದ್ರಾ ಮಂಡಳಿ ಸಭೆಯಲ್ಲಿ ಮಂಡಿಸಲಾಗಿದ್ದು ಪ್ರಸ್ತಾವನೆಯು ಆಂಧ್ರ ಪ್ರದೇಶ ಹಾಗೂ ತೆಲಂಗಾಣ ಸರ್ಕಾರಗಳ ಪರಿಶೀಲನೆಯಲ್ಲಿರುತ್ತದೆ. ಸದರಿ ಯೋಜನೆಯ ವಿವರವಾದ ಯೋಜನಾ ವರದಿಯನ್ನು ತಯಾರಿಸುವ ಸಲುವಾಗಿ ಕನ್ಸಲ್ಟೆನ್ಸಿ ಟೆಂಡರ್ ಆಹ್ವಾನಿಸಲು ಕ್ರಮ ಜರುಗಿಸಲಾಗುತ್ತಿದೆ.
ಆ)	ಎನ್.ಆರ್.ಬಿ.ಸಿ 0.00 ದಿಂದ 95 ಕಿ.ಮೀ ವರೆಗೂ ಕಾಲುವೆಯ ಆಧುನೀಕರಣ ಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ಸದರಿ ಕಾಮಗಾರಿಗೆ ತಗಲುವ ವೆಚ್ಚ ಎಷ್ಟು; ಎಂದಿನಿಂದ ಕಾಮಗಾರಿ ಪ್ರಾರಂಭಿಸಲಾಗುವುದು?	ದಿನಾಂಕ: 8-3-2019ರ ಸರ್ಕಾರದ ಆದೇಶದಲ್ಲಿ ರೂ.750.00ಕೋಟಿಗಳ ಮೊತ್ತಕ್ಕೆ ಎನ್.ಆರ್.ಬಿ.ಸಿ 0.00 ದಿಂದ 95 ಕಿ.ಮೀ ವರೆಗೂ ಕಾಲುವೆಯ ಆಧುನೀಕರಣಗೊಳಿಸುವ ಕಾಮಗಾರಿಗೆ ತಾತ್ವಿಕ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಮತ್ತು ಮೊದಲನೇ ಹಂತದಲ್ಲಿ ರೂ.375.00 ಕೋಟಿಗಳಿಗೆ ಸೀಮಿತಗೊಳಿಸಿ ಕಾಮಗಾರಿ ಕೈಗೆತ್ತಿಕೊಳ್ಳಲು ಆದೇಶಿಸಿದೆ. ಕಾಮಗಾರಿ ಪ್ರಾರಂಭಿಸಲು ಕೃಷ್ಣ ಭಾಗ್ಯ ಜಲ ನಿಗಮದಿಂದ ಕ್ರಮ ಜರುಗಿಸಲಾಗುತ್ತಿದೆ.

ಸಂಖ್ಯೆ: ಜಸಂಇ 3 ಎಂಎಲ್ಎ 2019

(ಡಿ. ಕೆ. ಶಿವಕುಮಾರ್)
ಜಲಸಂಪನ್ಮೂಲ ಇಲಾಖೆ